# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 717 |
| 2 | ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ |
| 3 | ಉತ್ತರಿಸಬೇಕಾದ ದಿನಾಂಕ | 20/12/2021 |
| 4 | ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | 2021-22 ರ ಶೈಕ್ಷಣಿಕ ಸಾಲಿನಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಹೆಚ್ಚಿಸಲು ಅನುವಾಗುವಂತೆ ಸಂಬಂಧಿತ ಕಾಲೇಜುಗಳ ತಪಾಸಣೆ ನಡೆಸಿ, ವರದಿ ಸಲ್ಲಿಸಿದ ಪರಿವೀಕ್ಷಣಾ ತಂಡದ ಸದಸ್ಯರ ಹೆಸರು ಮತ್ತು ವಿಳಾಸದ ಸಂಪೂರ್ಣ ವಿವರ ನೀಡುವುದು; | 2021-22 ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹೊಸದಾಗಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ತಪಾಸಣಾ ತಂಡ ಆಗಮಿಸಿರುತ್ತದೆ. ತಪಾಸಣಾ ತಂಡದ ಸದಸ್ಯರ ವಿವರ **ಅನುಬಂಧ**ದಲ್ಲಿರಿಸಿದೆ. |
| ಆ) | ಈ ಸದಸ್ಯರು ಯಾವ ಯಾವ ಕಾಲೇಜುಗಳ ತಪಾಸಣೆ ನಡೆಸಿ ವರದಿ ಸಲ್ಲಿಸಿರುತ್ತಾರೆ ಎಂಬುದರ ಕುರಿತು ಮಾಹಿತಿ ನೀಡುವುದು; | ರಾಷ್ಟ್ರೀಯ ವೈದ್ಯಕೀಯ ಆಯೋಗದ Medical Assessment & Rating Board (MARB) ನಿಂದ 2021-22 ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ ಮತ್ತು ಯಾದಗಿರಿ ವೈದ್ಯಕೀಯ ಕಾಲೇಜುಗಳ ಪ್ರಾರಂಭಕ್ಕೆ ಸಂಬಂಧಿಸಿದಂತೆ ತಪಾಸಣೆ ನಡೆದಿರುತ್ತದೆ. |
| ಇ) | ವೈದ್ಯಕೀಯ ಕಾಲೇಜುಗಳಲ್ಲಿ ಯಾವುದೇ ಪೂರಕ ಸೌಲಭ್ಯಗಳು ಇಲ್ಲದಿದ್ದರೂ ಎಲ್ಲಾ ಸೌಲಭ್ಯಗಳು ಇವೆ ಎಂಬುದಾಗಿ ಆಮಿಷಕ್ಕೆ ಒಳಗಾಗಿ ವರದಿ ಸಲ್ಲಿಸಿದ ಪರಿವೀಕ್ಷಣಾ ತಂಡದ ಕುರಿತು ಸರ್ಕಾರದ ನಿಲುವೇನು; | ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ ಮತ್ತು ಯಾದಗಿರಿ ವೈದ್ಯಕೀಯ ಕಾಲೇಜುಗಳ ತಪಾಸಣೆ ನಡೆಸಿ ಸದರಿ ಕಾಲೇಜುಗಳಲ್ಲಿನ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಬೋಧಕ & ಬೋಧಕೇತರ ಸಿಬ್ಬಂದಿಗಳ ಕೊರತೆ, ಉಪಕರಣ ಮತ್ತು ಪೀಠೋಪಕರಣಗಳ ಲಭ್ಯತೆ ಇಲ್ಲದಿರುವುದನ್ನು ಗಮನಿಸಿ ಸದರಿ ಕಾಲೇಜುಗಳನ್ನು 2021-22 ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡಿರುವುದಿಲ್ಲ. |
| ಈ) | ಯಾವುದೇ ಪೂರಕ ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳು ಇಲ್ಲದಿರುವ ಕುರಿತು ಸಾರ್ವಜನಿಕರಲ್ಲಿ ಸ್ಪಷ್ಟವಾದ ಮಾಹಿತಿ ಇದ್ದರೂ ಎಲ್ಲಾ ಪೂರಕ ಸೌಲಭ್ಯಗಳು ಇವೆ ಎಂಬುದಾಗಿ ಪರಿವೀಕ್ಷಣಾ ತಂಡವು ವರದಿ ಸಲ್ಲಿಸಿರುವುದರಿಂದ ಬಡ ಪ್ರತಿಭಾವಂತ, ಹಿಂದುಳಿದ SC ಮತ್ತು ST ಹಾಗೂ ರೈತರ ಮಕ್ಕಳಿಗೆ ಮೋಸ ಮಾಡಿದಂತಾಗಿದ್ದು, ಅಂತಹ ಪರಿವೀಕ್ಷಣಾ ತಂಡದ ವಿರುದ್ಧ ರಾಷ್ಟ್ರದ್ರೋಹದಂತಹ ಕ್ರಿಮಿನಲ್ ಪ್ರಕರಣ ದಾಖಲಿಸುವ ಕುರಿತು ಸರ್ಕಾರದ ನಿಲುವೇನು? | ಮೇಲಿನಂತೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಎಂಇಡಿ 615 ಎಂಎಂಸಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

# ಅನುಬಂಧ

| ಕ್ರ ಸಂ | ಕಾಲೇಜಿನ ಹೆಸರು | ಪರಿವೀಕ್ಷಣಾ ತಂಡದ ಸದಸ್ಯರ ಹೆಸರು | ವಿಳಾಸ |
|---|---|---|---|
| 1. | ಚಿಕ್ಕಬಳ್ಳಾಪುರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಬಳ್ಳಾಪುರ | 1. Dr. Dipesh v parmar | MP Shah Govt College, Jamnagar |
| | | 2. Dr. Shriknat Shete | Jhalawar Medical College, Jhalawar |
| | | 3. Dr. P.K Bhattacharjee | Bankura Samillani Medical College& Hospital, Bankura |
| 2. | ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ | 1. Dr. Umesh Varshney | Professor of Microbiology, Uttarakhand |
| | | 2. Dr. Ramesh Bharti | Professor of General Surgery, Himacala Pradesh |
| | | 3. Dr. Raghuveer Choudhary | Professor of Radiology, Haryana |
| 3. | ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾಗದಿರಿ | 1. Dr. Quazi Mahfuzur Rahaman | Professor, Department of Surgery, Calcutta National Medical College, Kolkatta. |
| | | 2. Dr. Vimala Thomas | Professor of Community Medicine, Gandhi Medical College, Secunderabad. |
| 4. | ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು. | 1. Dr. Samir Vinayak Joshi, Professor | Department of ENT, B J Government Medical College, PUNE, Maharashtra |
| | | 2. Dr. S K Bajaj, Professor | Professor of Physiology, Dr. B S A Medical College, Rohini, Sector-06, Delhi |